ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ,
ಮಾಗಡಿ ರಸ್ತೆ, ಬೆಂಗಳೂರು.

ಸಂಖ್ಯೆ:ಹಿಆಸ/27/2020-2021 ದಿನಾಂಕ: 19.04.2021

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: ಕಲ್ಯಾಣ ಕರ್ನಾಟಕ ಭಾಗದ ಕಿರಿಯ ಪುರುಷ ಆರೋಗ್ಯ ಸಹಾಯಕರುಗಳಿಗೆ ಹಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: 1. ನಿರ್ದೇಶನಾಲಯದ ಅಂತಿಮ ಜೇಷ್ಠತಾ ಪಟ್ಟಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಹಿಆಸ/09/2019-20, ದಿನಾಂಕ:07.10.2020 ಹಾಗೂ 12.01.2021.

2. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಹಿಆಸ/27/2020-21, ದಿನಾಂಕ;22.10.2020.

3. ಇಲಾಖಾ ಪದೋನ್ನತಿ ಸಮಿತಿ ಸಭೆಯ ನಡವಳಿ ದಿನಾಂಕ:20.01.2021.

4. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯರುಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಕಾಯ್ದೆ-2011 ಮತ್ತು ತಿದ್ದುಪಡಿ ಆದೇಶ 2013

5. ಸರ್ಕಾರದ ಆದೇಶ ಸಂ: ಆಕುಕ 52 ಹೆಚ್‌ಪಿಸಿ 2014, ಬೆಂಗಳೂರು, ದಿನಾಂಕ: 03.06.2014 ಹಾಗೂ ಪರಿಷ್ಕೃತ ಅಧಿಸೂಚನೆ ಸಂ: ಆಕುಕ 52 ಎಚ್‌ಪಿಸಿ 2014, ದಿನಾಂಕ:12.06.2015.

* * * * *

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕ ಭಾಗದ ಕಿರಿಯ ಪುರುಷ ಆರೋಗ್ಯ ಸಹಾಯಕರುಗಳಿಗೆ ಉಲ್ಲೇಖ(1)ರಲ್ಲಿನ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪ್ರಕಟಿಸಿರುವ ಜೇಷ್ಠತಾ ಪಟ್ಟಿಯನ್ನು ಆಧರಿಸಿ, ಉಲ್ಲೇಖ(5)ರನುಸಾರ ಕಲ್ಯಾಣ ಕರ್ನಾಟಕ 371ಜೆ ಮೀಸಲಾತಿಯನುಸಾರ **ಅನುಬಂಧ-1** ರಲ್ಲಿನ ಕಲ್ಯಾಣ ಕರ್ನಾಟಕ ಭಾಗದ 2016 ರ 09 ಬ್ಯಾಕ್‌ಲಾಗ್ ಹುದ್ದೆಗಳು, **ಅನುಬಂಧ-2** ರಲ್ಲಿನ ಕಲ್ಯಾಣ-ಕರ್ನಾಟಕ ಭಾಗದ ಕ್ರ.ಸಂ. 01 ರಿಂದ 87 ರವರೆಗಿನ ಕಿರಿಯ ಪುರುಷ ಆರೋಗ್ಯ ಸಹಾಯಕರುಗಳಿಗೆ ವೇತನ ಶ್ರೇಣಿ ರೂ.30350-750-32600-850-36000-950-39800-1100-46400-1250-5300-1450-58250 ರಲ್ಲಿ ಹಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ ನಿಯಮ 42(ಬಿ) ರನ್ವಯ ಈ ಕೆಳಕಂಡ ಷರತ್ತಿಗೊಳಪಟ್ಟು ಸ್ಥಾನಪನ್ನ ಪದೋನ್ನತಿ ನೀಡಲಾಗಿದೆ.

1. ಪದೋನ್ನತಿ ಬಗ್ಗೆ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಆಕ್ಷೇಪಣೆ ಬಂದಲ್ಲಿ ಅದನ್ನು ರದ್ದುಪಡಿಸುವ ಅಧಿಕಾರ ಈ ನಿರ್ದೇಶನಾಲಯಕ್ಕೆ ಇರುತ್ತದೆ.

2. ಈ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪದೋನ್ನತಿ ನೀಡಿರುವ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದು ಮತ್ತು ಜೇಷ್ಠತೆಯಲ್ಲಿ ಕಿರಿಯರಾಗಿರುವುದು ಕಂಡುಬಂದಲ್ಲಿ ಅಂತಹ ನೌಕರರ ಪದೋನ್ನತಿಯನ್ನು ಯಾವುದೇ ಮುನ್ಸೂಚನೆ ಅಥವಾ ಕಾರಣ ತಿಳಿಸದೇ ಹಿಂಪಡೆಯುವ/ರದ್ದುಪಡಿಸುವ ಷರತ್ತಿಗೊಳಪಟ್ಟಿರುತ್ತದೆ ಹಾಗೂ ಸಂಬಂಧಿಸಿದ ನೌಕರರ ಕಾರ್ಯ ನಿರ್ವಹಣಾ ವರದಿಗೆ ಸಹಿ ಮಾಡಿದ ಅಧಿಕಾರಿ/ಕಛೇರಿ ಮುಖ್ಯಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

3. ಸುಳ್ಳು ಮಾಹಿತಿ/ಜಾತಿ ಪ್ರಮಾಣ ಪತ್ರ ನೀಡಿ ಪದೋನ್ನತಿ ಪಡೆದಿರುವುದು ಕಂಡು ಬಂದಲ್ಲಿ ಅಂತಹವರ ಪದೋನ್ನತಿಯನ್ನು ರದ್ದುಪಡಿಸಲಾಗುವುದು ಹಾಗೂ ಅಂತಹ ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು.

4. ಪದೋನ್ನತಿ ಹೊಂದಿರುವ ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡಿ ನೇಮಕಾತಿ ಮಾಡಿರುವ ಸ್ಥಳದಲ್ಲಿ ಕರ್ತವ್ಯದ ಮೇಲೆ ಹಾಜರಾಗುವಂತೆ ಸಂಬಂಧಪಟ್ಟ ನೌಕರರುಗಳಿಗೆ ಸೂಚಿಸುವಂತೆ ಮೇಲಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಆದೇಶಿಸಿದೆ.

5. ಪದೋನ್ನತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ನೌಕರರು ಈ ಆದೇಶ ಹೊರಡಿಸಿರುವ ದಿನಾಂಕದಿಂದ ಏಳು(07) ದಿನದೊಳಗಾಗಿ ನಿಯುಕಾತಿ ಮಾಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿ, ಹಾಜರಾತಿ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ. ತಪ್ಪಿದಲ್ಲಿ ಅಂತಹವರ ಪದೋನ್ನತಿ ಆದೇಶವನ್ನು ಯಾವುದೇ ಮುನ್ಸೂಚನೆ ನೀಡದೆ ಹಿಂಪಡೆಯಲಾಗುವುದೆಂದು ಹಾಗೂ ಕರ್ತವ್ಯದಿಂದ ಬಿಡುಗಡೆಗೊಳ್ಳದೆ ವಿಳಂಬವಾಗಿ ಬಿಡುಗಡೆಗೊಂಡು ವರದಿ ಮಾಡಿಕೊಳ್ಳುವ ನೌಕರರ ಜೇಷ್ಠತೆಯನ್ನು ಜೇಷ್ಠತಾ ನಿಯಮಗಳನ್ವಯ ನಿಗದಿಪಡಿಸಲಾಗುವುದೆಂದು ತಿಳಿಸಲಾಗಿದೆ.

6. ಪದೋನ್ನತಿ ಹೊಂದಿ ನೇಮಕಗೊಂಡು ಸ್ಥಳ ನಿಯುಕ್ತಿ ಹೊಂದಿದ ನೌಕರರುಗಳ ಸ್ಥಳ ಮಾರ್ಪಾಡು ಕೋರಿ ಸಲ್ಲಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಯಾವುದೇ ಶಿಫಾರಸ್ಸು/ಪ್ರಭಾವ/ಒತ್ತಡಗಳನ್ನು ತರತಕ್ಕದ್ದಲ್ಲ.

7. ಹಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಆರ್ಥಿಕ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ನಾಗರೀಕ ಸೇವೆಗಳು (ವೈದ್ಯರು ಮತ್ತು ಇತರೆ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011 ಹಾಗೂ ತಿದ್ದುಪಡಿ 2013ರ ಆದೇಶದನ್ವಯ ಸಮಾಲೋಚನೆಯಲ್ಲಿ ಭಾಗವಹಿಸಿ ಆಯ್ಕೆ ಮಾಡಿಕೊಂಡಿರುವ ಸ್ಥಳಕ್ಕೆ 18ರನ್ವಯ ಹಾಗೂ ಪದೋನ್ನತಿ ತಿರಸ್ಕರಿಸಿರುವ/ಗೈರು ಹಾಜರಿಯಾಗಿರುವ ಕಿರಿಯ ಪುರುಷ ಆರೋಗ್ಯ ಸಹಾಯಕರುಗಳನ್ನು ನಿಯಮ 18(ಸಿ) ಅನ್ವಯ ಸುಮೋಟೋದಡಿಯಲ್ಲಿ ನೇಮಿಸಲಾಗಿದೆ. ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳಕ್ಕೆ ನಿಯುಕ್ತಿಗೊಳಿಸಿ ಆದೇಶಿಸಿದೆ.

ಅನುಬಂಧ-1

ಕಲ್ಯಾಣ ಕರ್ನಾಟಕ

| ಕ್ರ. ಸಂ. | ಜೇಷ್ಠತಾ ಸಂಖ್ಯೆ | ನೌಕರರ ಹೆಸರು | ವರ್ಗ | ಸಮಾಲೋಚನೆಯಲ್ಲಿ ಆಯ್ಕೆ ಮಾಡಿಕೊಂಡಂತೆ ಹಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಗೆ ಪದೋನ್ನತಿ ನೀಡಿ ನಿಯಕ್ತಿಗೊಳಿಸಿ ನೇಮಿಸಿರುವ ಸ್ಥಳ |
|---|---|---|---|---|
| | | 2016 ರ ಬ್ಯಾಕ್‌ಲಾಗ್ ಹುದ್ದೆಗಳು | | |
| 1 | 14 | ಸುರೇಕಾಂತ, ಸಮುದಾಯ ಆರೋಗ್ಯ ಕೇಂದ್ರ, ದೇ. ಗಾಣಗಾಪೂರ, ಅಫಜಲಪುರ ತಾ: ಕಲಬುರಗಿ ಜಿಲ್ಲೆ | ಪ.ಜಾ | ಕಾಲರಾ ನಿಯಂತ್ರಣ ತಂಡ ಕಲುಬುರಗಿ ಜಿಲ್ಲೆ |
| 2 | 16 | ಹೀರಾಲಾಲ್ ಚವ್ಹಾಣ, ಪ್ರಾಥಮಿಕ ಆರೋಗ್ಯ ಕೇಂದ್ರ, ಚಾಮನಾಳ, ಶಹಾಪೂರ ತಾ: ಯಾದಗಿರಿ ಜಿಲ್ಲೆ | ಪ.ಜಾ | ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ ಯಾದಗಿರಿ ಜಿಲ್ಲೆ |
| 3 | 19 | ಶರಣಬಸಪ್ಪ ಹೊಸ್ಮನಿ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಛೇರಿ, ಯಾದಗಿರಿ | ಪ.ಜಾ | ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ ಕಲಬುರಗಿ ಜಿಲ್ಲೆ |
| 4 | 20 | ಶರಣಪ್ಪ, ಪ್ರಾಥಮಿಕ ಆರೋಗ್ಯ ಕೇಂದ್ರ, ಹತ್ತಿಗುಡೂರ, ಶಹಾಪೂರ ತಾ: ಯಾದಗಿರಿ ಜಿಲ್ಲೆ | ಪ.ಜಾ | (ಸುಮೋಟೋ) ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಸಿಂಧನೂರು ತಾ ರಾಯಚೂರು ಜಿಲ್ಲೆ |
| 5 | 23 | ಶಿವರಾಜ, ಪ್ರಾಥಮಿಕ ಆರೋಗ್ಯ ಕೇಂದ್ರ, ಆಂದೋಲಾ, ಜೇವರ್ಗಿ ತಾ: ಕಲಬುರಗಿ ಜಿಲ್ಲೆ | ಪ.ಜಾ | ಪ್ರಾಥಮಿಕ ಆರೋಗ್ಯ ಕೇಂದ್ರ ನರಿಬೋಳ ಜೇವರ್ಗಿ ತಾ॥, ಕಲಬುರಗಿ ಜಿಲ್ಲೆ |
| 6 | 75 | ಶಾಂತಿಲಾಲ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಶಹಾಪುರ ತಾ: ಯಾದಗಿರಿ ಜಿಲ್ಲೆ | ಪ.ಜಾ | ಜಿಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಯಾದಗಿರಿ ಜಿಲ್ಲೆ |
| 7 | 103 | ಭೀಮಶಪ್ಪ, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಛೇರಿ, ರಾಯಚೂರು | ಪ.ಜಾ | ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳ ಕಛೇರಿ, ರಾಯಚೂರು |